## ಫೇಸ್‌ಬುಕ್ ಸ್ವಚ್ಛಗೊಳಿಸಲು ‘ಫೇಸ್‌ವಾಷ್’

ಫೇಸ್‌ಬುಕ್‌ನಲ್ಲಿರುವ ಬೇಡದ ಬರಹಗಳನ್ನು, ಚಿತ್ರಗಳನ್ನು ಅಳಿಸಿ ಹಾಕಬೇಕಾ? ಅದಕ್ಕೆಂದೇ ಬಂದಿದೆ ‘ಫೇಸ್‌ವಾಷ್’ ಅಪ್ಲಿಕೇಶನ್. ಇದರಿಂದ ನಿಮಗೆ ಬೇಡವಾದ ವಿಷಯಗಳನ್ನು ಕಿತ್ತು ಹಾಕಬಹುದು ಇಲ್ಲವೇ ಅಡಗಿಸಿಡಬಹುದು. ಸ್ಟೇಟಸ್ ಅಪ್‌ಡೇಟ್, ಚಿತ್ರ ಶೀರ್ಷಿಕೆಯಿಂದ ಹಿಡಿದು ಬೇರೆಯವರು ಮಾಡಿದ ಟೀಕೆಗಳನ್ನು ಕೂಡಾ ಅಳಿಸಿ ಹಾಕಬಹುದು.

ಇದಕ್ಕಾಗಿ ಫೇಸ್‌ವಾಷ್ ವೆಬ್‌ಸೈಟ್‌ಗೆ ಹೋಗಿ ‘ಗೆಟ್ ಸ್ಟಾರ್ಟೆಡ್’ ಮೇಲೆ ಕ್ಲಿಕ್ ಮಾಡಿ. ಹಾಗೆಯೇ ಫೇಸ್‌ಬುಕ್ ಖಾತೆಗೂ ಲಾಗಾನ್ ಆಗಿ. ನಂತರ ‘ಗೋ ಟು ಆ್ಯಪ್’ಗೆ ಹೋದರೆ ಮುಂದಿನದೆಲ್ಲಾ ಸಲೀಸು. ಇದರಲ್ಲಿ ‘ಹುಡುಕು’ ಆಯ್ಕೆ ಕೂಡ ಇದೆ.




## ಲೇಸರ್ ಕೀಬೋರ್ಡ್



ಗೂಗ್ಲ್ ಕನ್ನಡಕ ಗೊತ್ತಿರಬಹುದಲ್ಲ. ಇದು ಮೈಕ್ರೋಫೋನ್ ಹೊಂದಿದ್ದು, ಚಿತ್ರಗಳನ್ನು ತೆಗೆಯಲು ಬಟನ್ ಕೂಡ ಒಳಗೊಂಡಿದೆ. ಆದರೆ ಗದ್ದಲವಿರುವ ಜಾಗಗಳಲ್ಲಿ ಬಳಸಲು ಸಾಧ್ಯವಿಲ್ಲ. ಅಲ್ಲಿ ಉದ್ದುದ್ದ ಸಂದೇಶಗಳನ್ನು ಬರೆಯಬೇಕಾದರೆ ಏನು ಮಾಡಬಹುದು? ಅದಕ್ಕೆಂದೇ ಲೇಸರ್ ಕೀಬೋರ್ಡ್ ತರಲು ಗೂಗ್ಲ್ ಎಲ್ಲಾ ಸಿದ್ಧತೆ ನಡೆಸಿದೆ. ಇದಕ್ಕಾಗಿ ಪೇಟೆಂಟ್‌ಗೆ ಕೂಡ ಅರ್ಜಿ ಸಲ್ಲಿಸಿದೆ. ಕನ್ನಡಕದ ರಿಮ್‌ನಲ್ಲಿ ಲೇಸರ್ ಪ್ರೊಜೆಕ್ಟರ್ ಇಡಲಾಗುವುದು. ಇದು ಬಳಕೆದಾರನ ಅಂಗೈ ಮೇಲೆ ಕೀಬೋರ್ಡ್ ಚಿತ್ರವನ್ನು ಮೂಡಿಸುತ್ತದೆ. ಮುಂದಿನದೆಲ್ಲಾ ಸಲೀಸು. ಬಳಕೆದಾರ ತನ್ನ ದೇಹವನ್ನೇ ಟಚ್‌ಸ್ಕ್ರೀನ್ ತರಹ ಬಳಸಬಹುದು. ಬೇಕಾದ ಕೀಗಳನ್ನು ಕುಟ್ಟಬಹುದು.

## ಟೆಂಪಲ್ ರನ್ 2

ಟೆಂಪಲ್ ರನ್ 2 ಅತ್ಯಂತ ಜನಪ್ರಿಯ ಮೊಬೈಲ್ ಗೇಮ್. ಇದು ಮೂಲ ಟೆಂಪಲ್ ರನ್ ಗೇಮ್‌ಗಿಂತ ಹೆಚ್ಚುವರಿ ಅಂಶಗಳನ್ನು ಒಳಗೊಂಡಿದೆ. ಇಲ್ಲಿ ತೇಲಾಡುವ ಮಂದಿರಕ್ಕೆ ಮಾರ್ಗ ಹುಡುಕಲು ಕೆಳಗಿಳಿದು, ಮೇಲಕ್ಕೆ ಹತ್ತಿ, ಎಡಬಲ ನುಗ್ಗಬೇಕು. ಜೊತೆಗೆ ಗ್ರಾಫಿಕ್ ಕೂಡಾ ಅತ್ಯಂತ ಆಕರ್ಷಕವಾಗಿದೆ. ಮಧ್ಯೆ ಎದುರಾಗುವ ಬೆಂಕಿ ನೈಜವಾಗಿ ಕಾಣುತ್ತದೆ. ಈ ಅಪ್ಲಿಕೇಶನ್ ಉಚಿತವಾಗಿದ್ದು ಐಓಎಸ್ ಸಾಧನಗಳಲ್ಲಿ ಲಭ್ಯ.



## ಮೊಬೈಲ್‌ನಲ್ಲೂ 3ಡಿ ಸೆನ್ಸರ್




3ಡಿ ಸೆನ್ಸರ್‌ಗಳು ಗೊತ್ತಲ್ಲ. ಸರಳ ಹಾವಭಾವಗಳಿಂದಲೇ ಟೀವಿಯನ್ನು ನಿಯಂತ್ರಿಸಲು ಇದರಿಂದ ಸಾಧ್ಯ. ಈಗ ಈ 3ಡಿ ಸೆನ್ಸರ್‌ಗಳ ಹೊಸ ಅವತರಣಿಕೆ ಅತ್ಯಂತ ಚಿಕ್ಕದಾದ ‘ಕ್ಯಾಪ್ರಿ’ಯನ್ನು ಮೊಬೈಲ್‌ನಲ್ಲಿ, ಕಂಪ್ಯೂಟರ್, ಟ್ಯಾಬ್ಲೆಟ್‌ನಲ್ಲಿ ಜೋಡಿಸುವುದರಿಂದ ಹೊಸ ಹೊಸ ಅಪ್ಲಿಕೇಶನ್‌ಗಳನ್ನು ತೆರೆಯಬಹುದು. ಇಸ್ರೇಲ್ ಕಂಪೆನಿ ಪ್ರೈಮ್‌ಸೆನ್ಸ್ ಇದನ್ನು ಸಿದ್ಧಪಡಿಸಿದ್ದು ಮುಂದಿನ ವರ್ಷದ ಹೊತ್ತಿಗೆ ಕ್ಯಾಪ್ರಿ ಜೋಡಿಸಿದ ಮೊಬೈಲ್, ಕಂಪ್ಯೂಟರ್ ಗ್ರಾಹಕರ ಕೈ ಸೇರಲಿವೆ.

■ ಎಸ್. ತುಂಬೆ